ಒಂದು ಕರ್ತವ್ಯ ಎಂದು ಪರಿಗಣಿಸಿದ್ದರು. ಇದೇ ಅವಧಿಯಲ್ಲಿ ಸ್ವಾಮೀಜಿ ಹೈದರಾಬಾದಿನ ನವಾಬರ ಜೊತಗೆ ಸಂದರ್ಶನ ವೊಂದನ್ನು ನಡೆಸಿದರು. ಅದರ ಒಂದು ವರದಿಯ ತುಣುಕು ಗಳು ಹೀಗಿವೆ: ''ಸ್ವಾಮೀಜಿ ಪಾಶ್ಚಾತ್ಯ ನಾಡುಗಳಿಗೆ ಹೋಗಿ ಸನಾತನ ಧರ್ಮದ ಚಿರಂತನ ಸಂದೇಶವನ್ನು ಬೋಧಿಸುವ ತಮ್ಮ ಘನ ಉದ್ದೇಶವನ್ನು ವ್ಯಕ್ತಪಡಿಸಿದರು.'' ಈ ಉದ್ದೇಶವು ಕನಿಷ್ಠಪಕ್ಷ ಸ್ವಾಮೀಜಿ ಅಮೆರಿಕಾದಲ್ಲಿ ಕಳೆದ ಮೊದಲ ವರ್ಷ ದಲ್ಲಿಯಾದರೂ ಅವರ ಮನಸ್ಸಿನಲ್ಲಿ ಇದ್ದೇ ಇತ್ತು ಎಂದು ಹೇಳ ಬಹುದು. ಆದರೆ ಇದು ಸ್ವಾಮೀಜಿಯ ತಾಯ್ನಾಡಿನ ಪುನರು ದ್ಧಾರದ ಮಹಾನ್ ಯೋಜನೆಯ ಒಂದು ಅವಿಭಾಜ್ಯ ಅಂಗ ವಾಗಿತ್ತು. ಅವರು ತಮ್ಮ ಮದ್ರಾಸ್ ನಗರದ ಅನುಯಾಯಿ ಗಳಿಗೆ ಹೀಗೆ ಹೇಳಿದರು: ''ಭಾರತ ದೇಶದ ಸಾಮಾನ್ಯ ಜನಗಳ ಸಲುವಾಗಿಯೇ ನಾನು ಪಾಶ್ಚಾತ್ಯ ದೇಶಗಳಿಗೆ ಹೋಗು ತ್ತಿದ್ದೇನೆ.''

ತಮ್ಮ ಈ ಯೋಜನೆಯ ಬಗ್ಗೆ ಅವರು ಸರ್ವಧರ್ಮ ಸಮ್ಮೇಳನದ ನಂತರ ತಾವು ಹರಿದಾಸ್ ವಿ. ದೇಸಾಯಿ ಅವರಿಗೆ ಬರೆದ ಪತ್ರದಲ್ಲಿ ಸ್ಪಷ್ಟಪಡಿಸುತ್ತಾರೆ: ''ಕೆಲವು ಪ್ರತಿನಿಧಿಗಳು ಭಾರತದಿಂದ ಹೊರಬಂದು ಪ್ರಪಂಚದ ಎಲ್ಲ ದೇಶಗಳಿಗೂ ಪ್ರವಾಸ ಮಾಡಿ, ಭಾರತೀಯರು ಅನಾಗರಿಕರಲ್ಲ ಎನ್ನುವು ದನ್ನು ತೋರಿಸಿಕೊಡಬೇಕು. ಭಾರತದ ನಿಮ್ಮ ಸ್ವಗೃಹದಿಂದ ಇದರ ಆವಶ್ಯಕತೆಯನ್ನು ನೀವು ಮನಗಾಣದಿರಬಹುದು. ಆದರೆ, ಈ ಕಾರ್ಯವು ನಿಮ್ಮ ದೇಶಕ್ಕೆ ಅತ್ಯಾವಶ್ಯಕವಾದುದು.''

ಸ್ವಾಮೀಜಿಯವರ ಮುಖ್ಯ ಉದ್ದೇಶ ಅಮೆರಿಕದ ಜನಗಳಿಗೆ ವೇದಾಂತವನ್ನು ಬೋಧಿಸುವುದಾಗಿರಲಿಲ್ಲ ಎಂದು ನಾವು ಒತ್ತಿ ಹೇಳಿದರೂ, ಇದಕ್ಕೆ ವಿರುದ್ಧವಾದ ಕೆಲವು ಮಾಹಿತಿಗಳು ಕೂಡ ನಮಗೆ ಲಭ್ಯವಾಗಿರುವುದು ಕೂಡ ಸತ್ಯವೇ ಆಗಿದೆ. ಉದಾ ಹರಣೆಗೆ, ಡಿಸೆಂಬರ್ ೨೮, ೧೮೯೩ರಲ್ಲಿ ಹರಿದಾಸ್ ಮಿತ್ರರಿಗೆ ಬರೆದ ಪತ್ರದಲ್ಲಿ ಹೀಗೆ ಹೇಳುತ್ತಾರೆ: ''ಅಧ್ಯಾತ್ಮದ ವಿಷಯಕ್ಕೆ ಬಂದರೆ, ಅಮೆರಿಕದ ಜನರು ನಮಗಿಂತ ಬಹಳಷ್ಟು ಕೆಳಮಟ್ಟ ದಲ್ಲಿದ್ದಾರೆ. ನಾವು ಅವರಿಗೆ ಅಧ್ಯಾತ್ಮವನ್ನು ಬೋಧಿಸುತ್ತೇವೆ ಹಾಗೂ ಅವರ ಸಮಾಜದಲ್ಲಿರುವ ಉತ್ತಮ ಅಂಶಗಳನ್ನು ನಮ್ಮ ಸಮಾಜದಲ್ಲಿ ಅಳವಡಿಸಿಕೊಳ್ಳುತ್ತೇವೆ.'' ಇದಲ್ಲದೆ, ಜನವರಿ ೧೮೯೪ರಂದು ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದ ಪತ್ರದಲ್ಲಿ ಅವರು ಹೀಗೆ ಬರೆಯುತ್ತಾರೆ: ''ನಮ್ಮ ದೇಶದಲ್ಲಿ ಸಾಮಾಜಿಕ ಮೌಲ್ಯಗಳ ಕೊರತೆ ಎದ್ದುಕಾಣುತ್ತಿದೆ. ಇದೇ ರೀತಿ, ಈ ದೇಶ ದಲ್ಲಿ (ಅಮೆರಿಕಾ) ಆಧ್ಯಾತ್ಮಿಕ ಮೌಲ್ಯಗಳ ಕೊರತೆ ಇದೆ. ನಾನು ಅವರಿಗೆ ಆಧ್ಯಾತ್ಮಿಕತೆಯನ್ನು ನೀಡುತ್ತೇನೆ. ಅವರು ನನ್ನ ಕಾರ್ಯ ಕ್ಕಾಗಿ ಧನಸಹಾಯವನ್ನು ಮಾಡುತ್ತಾರೆ.''

ಮೇಲೆ ಉಲ್ಲೇಖಿಸಿದ ಎರಡು ಪತ್ರಗಳಲ್ಲಿಯೂ ಸ್ವಾಮೀಜಿ ತಾವು ಅಮೆರಿಕಾ ಪ್ರವಾಸ ಮಾಡಿದ ಉದ್ದೇಶವನ್ನು ಸ್ಪಷ್ಟಪಡಿಸಿ ದ್ದಾರೆ. ಅವರು ಹರಿದಾಸ ಮಿತ್ರರಿಗೆ ಹೀಗೆ ಬರೆಯುತ್ತಾರೆ: ''ನಾನು ಈ ಅಮೆರಿಕಾಗೆ ಬಂದದ್ದು ಭಾರತದಲ್ಲಿನ ಬಡಜನರ ಉದ್ಧಾರಕ್ಕಾಗಿ ಏನಾದರೂ ಸಹಾಯವನ್ನು ಪಡೆಯಲೆಂದು. ಭಗವಂತನು ನನ್ನ ಸಹಾಯಕ್ಕೆ ಬಂದರೆ ಅದು ಕೈಗೂಡುವುದು, ಅದೇನೆಂಬುದನ್ನು ನೀವು ಕಾಲಕ್ರಮೇಣ ಅರಿತುಕೊಳ್ಳುತ್ತೀರಿ.'' ಸ್ವಾಮಿ ರಾಮಕೃಷ್ಣಾನಂದರಿಗೆ ಸ್ವಾಮೀಜಿ ಹೀಗೆ ಬರೆಯುತ್ತಾರೆ: ''ನನ್ನ ಈ ಉದ್ದೇಶವನ್ನು ಪೂರೈಸಿಕೊಳ್ಳಲು ಎಷ್ಟು ಕಾಲ ಹಿಡಿ ಯುತ್ತದೆ ಎಂದು ನನಗೆ ತಿಳಿಯದು. ಇದಕ್ಕಾಗಿ ಬೇಕಾದ ಎಲ್ಲ ಸಲಕರಣೆಗಳನ್ನು ಸಂಪಾದಿಸಿಕೊಳ್ಳಲು ನನ್ನ ಶಕ್ತಿಮೀರಿ ನಾನು ಪ್ರಯತ್ನಿಸುತ್ತೇನೆ; ನನ್ನ ಯೋಜನೆಗಳನ್ನು ಕಾರ್ಯರೂಪಕ್ಕೆ ನಾನು ತಂದೇ ತರುತ್ತೇನೆ ಇಲ್ಲವೇ ಈ ಪ್ರಯತ್ನದಲ್ಲಿ ನಾನು ಮರಣಹೊಂದಲೂ ಸಿದ್ಧನಿದ್ದೇನೆ.''

ಒಟ್ಟಾರೆ ಹೇಳುವುದಾದರೆ, ಸ್ವಾಮೀಜಿಯವರು ವೈಯಕ್ತಿಕ ವಾಗಿಯೂ, ಸಾಮೂಹಿಕವಾಗಿಯೂ ಅಮೆರಿಕಾದ ಜನತೆಗೆ ಆಧ್ಯಾತ್ಮಿಕ ನೆರವು ನೀಡುತ್ತಿದ್ದುದು ಸತ್ಯವೇನೋ ಸರಿ. ಆದರೆ ಮೇಲಿನ ಉಲ್ಲೇಖಗಳು ಆ ಕಾಲದಲ್ಲಿ ಸ್ವಾಮೀಜಿಯವರು ವೇದಾಂತ ಬೋಧನೆಯನ್ನೇ ತಮ್ಮ ಮುಖ್ಯ ಉದ್ದೇಶವನ್ನಾಗಿ ಇಟ್ಟುಕೊಂಡಿದ್ದರು ಎನ್ನುವುದನ್ನೇನೂ ಸೂಚಿಸುವುದಿಲ್ಲ.

ಇಷ್ಟಾದರೂ, ಧಾರ್ಮಿಕ ಬೋಧನೆಯ ಜಾಗತಿಕ ಯೋಜನೆ ಯೊಂದನ್ನು ಸ್ವಾಮೀಜಿ ಇಟ್ಟುಕೊಂಡಿದ್ದರು ಎನ್ನುವುದಕ್ಕೆ ಕೂಡ ಹಲವಾರು ಕುರುಹುಗಳು ಇವೆ. ೧೮೯೪ರ ಬೇಸಿಗೆ ಕಾಲದಲ್ಲಿ ತಮ್ಮ ಸಹೋದರ ಸಂನ್ಯಾಸಿಗಳಿಗೆ ಬರೆದ ಪತ್ರದಲ್ಲಿ ಶ್ರೀರಾಮ ಕೃಷ್ಣರ ಸಂದೇಶವನ್ನು ಜಗತ್ತಿನಾದ್ಯಂತ ಪ್ರಸಾರ ಮಾಡುವ ತಮ್ಮ ಆಕಾಂಕ್ಷೆಯನ್ನು ಅವರು ವ್ಯಕ್ತಪಡಿಸಿದ್ದರು. ಆ ಪತ್ರದಲ್ಲಿ ಅವರು ಹೀಗೆ ಬರೆಯುತ್ತಾರೆ: ''ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ, ಉತ್ತರ ಧ್ರುವ ಪ್ರದೇಶದಿಂದ ದಕ್ಷಿಣ ಧ್ರುವ ಪ್ರದೇಶದ ವರೆಗೆ – ಇಡೀ ಪ್ರಪಂಚದಾದ್ಯಂತ, ಸಂದೇಶವನ್ನು ಕಾಡ್ಗಿಚ್ಚಿನ ತರಹ ಪ್ರಸಾರ ಮಾಡುವ ಸಾವಿರಾರು ಪುರುಷರು ಮತ್ತು ಮಹಿಳೆಯರು ನಮಗೆ ಬೇಕಾಗಿದ್ದಾರೆ.'' ಸ್ವಾಮೀಜಿಯವರು ತಮ್ಮ ಗುರುದೇವರಾದ ಶ್ರೀರಾಮಕೃಷ್ಣರು ಸಾರಿದ ಸರ್ವ ಧರ್ಮ ಸಮಭಾವದ ಆಧ್ಯಾತ್ಮಿಕ ಸಂದೇಶವನ್ನು ಅಮೆರಿಕಾದ ಜನತೆಗೆ ನೀಡಿದರೆನ್ನುವುದೇನೋ ಸರಿಯೇ.

ಆ ಸಂದೇಶವು ಎಲ್ಲ ಧಾರ್ಮಿಕ ಪಂಗಡಗಳ ಮತ್ತು ಆಧ್ಯಾತ್ಮಿಕ ಸಾಧನೆಗಳ ಮೂಲಭೂತ ಅಡಿಪಾಯವಾಗಿದೆ. ಈ ಎಲ್ಲ ಆಲೋಚನೆಗಳು ಸ್ವಾಮೀಜಿಯವರ ಮನಸ್ಸಿನಲ್ಲಿ ಮೂಡು ತ್ತಿದ್ದ ತಮ್ಮ ಜೀವಿತಕಾರ್ಯದ ಯೋಜನೆಗಳ ಮುಂದುವರಿ ಕೆಯೇ ಹೊರತು, ಅಮೆರಿಕಾದಲ್ಲಿ ಮೊದಲ ವರ್ಷ ಅವರು ಕೈಗೊಂಡ ಕಾರ್ಯದ ಉದ್ದೇಶವಾಗಿರಲಿಲ್ಲ ಎನ್ನವುದು ಸುಸ್ಪಷ್ಟ ವಾಗಿದೆ.